ಇಸ್ತಿಹಾರ್ನಾಮೆ.

ತಾರೀಖು 21ನೆ ಜೂ 1909.

ನಾಗಮಂಗಲ ತಾಲ್ಲೂಕು ಕಸಬಾ ಹೋಬಳಿಗೆ ಸೇರಿದ ಜೋಡಿ ಹುಲ್ಲೇಕೆರೆ ಗ್ರಾಮವು ಸರ್ಕಾರಕ್ಕೆ ಬರಬೇಕಾದ ಬಾಕಿಗೋಸ್ಕರವಾಗಿ ನಾಗಮಂಗಲ ತಾಲ್ಲೂಕು ಕಛೇರಿಯಲ್ಲಿ 1909ನೆ ಆಗಸ್ಟು ಮಾಹೆ 7ನೆ ತಾರೀಖು ದಿವಸ ಬಹಿರಂಗವಾಗಿ ಹರಾಜು ಮಾಡಿಸಲ್ಪಡುತ್ತೆಂದು ಇದರಿಂದ ಪ್ರಸಿದ್ಧಪಡಿಸಲ್ಪಟ್ಟಿದೆ.

ಹೆಚ್ಚಿನ ತಪಶೀಲ್ ಬಗ್ಗೆ 1909ನೆ ಇಸವಿ ಜುಲೈ 8ನೆ ಮಂಗಳವಾರದ ಮೈಸೂರು ಗೆಜೆಟ್ಟಿನ II ನೆ ಭಾಗದ 538—539ನೆ ಪೇಜುಗಳನ್ನು ನೋಡತಕ್ಕದ್ದು.

ಎಸ್. ಪಿ. ರಾಜಗೋಪಾಲಾಚಾರ್, ಫಾರ್ ಡೆಪ್ಯುಟಿ ಕಮಿಷನರ್.

ಹಾಸನ ಡಿಸ್ಟ್ರಿಕ್ಟ್.

ಸ್ಯ 1909ನೆ ಇಸವಿ ಮೇ ಮಾಹೆ ತಾರೀಖು 3ರಲ್ಲಿ ನಡೆದ ಹಾಸನ ಡಿಸ್ಟ್ರಿಕ್ಟ್ ಬೋರ್ಡು ಮಿಾಟಿಂಗಿನ ಪ್ರೊಸೀಡಿಂಗ್ಸ್.

ಹಾಜರು.

ಪಿ. ಆರ್. ಡಬ್ಲ್ಯೂ. ವೆದರಾಲ್, ಎಸ್‌ಕ್ವೈರ್, ಪ್ರೆಸಿಡೆಂಟರು.

ಎಕ್ಸ್ ಅಫಿಷಿಯೋ ಮೆಂಬರುಗಳು.

ಮೆ|| ನರಸಿಂಗರಾವ್ ಪೂರ್ಣಯ್ಯ, ಬಿ. ಎ., ವೈಸ್ ಪ್ರೆಸಿಡೆಂಟರವರು.
,, ಎ. ಕೃಷ್ಣಸ್ವಾಮಿ ಐಯ್ಯಂಗಾರ್, ಬಿ. ಎ., ಸಕಲೇಶಪುರದ ಅಸಿಸ್ಟೆಂಟ್ ಕಮಿಷ್ನರವರು.
,, ಸಿ. ದೇವರಾಜೇ ಅರಸ್, ಜನರಲ್ ಅಸಿಸ್ಟೆಂಟ್ ಕಮಿಷ್ನರವರು.
,, ಪಿ. ಅಯ್ಯಾಸ್ವಾಮಿ ಅಯ್ಯರ್, ಬಿ. ಎ., ಬಿ. ಸಿ. ಇ, ಎಗ್ಜಿಕ್ಯೂಟಿವ್ ಇಂಜಿನಿಯರ್.
,, ಸಿ. ರಾಜಾರಾಮರಾವ್, ಎಲ್. ಎಂ. ಎಸ್., ಡಿಸ್ಟ್ರಿಕ್ಟ್ ಮೆಡಿಕಲ್ ಮತ್ತು ಸ್ಯಾನಿಟರಿ ಆಫಿಸರವರು.
,, ಎಂ. ಕೆ. ತಿರುಮಲಾಚಾರ್ಯರು, ಬಿ. ಎ., ಸ್ಕೂಲುಗಳ ಡೆಪ್ಯುಟಿ ಇನ್‌ಸ್ಪೆಕ್ಟರು.

ನಾರ್ ಅಫಿಷಿಯಲ್ ಮೆಂಬರುಗಳು.

ಮೆ|| ಎಂ. ಲಕ್ಷ್ಮೀನರಸಿಂಹ್ಮಾಚಾರ್ಯರು, ಹಾಸನ.
,, ಕೇಣಿ ಮಹದೇವಪ್ಪನವರು, ಹಾಸನ.
,, ಪುಟ್ಟೇಗೌಡ ಉರುಫ್ ನಂಜೇಗೌಡರು, ಮಂಜರಾಬಾದು.
,, ಕ. ತಮ್ಮಯ್ಯನವರು, ಬೇಲೂರು.
,, ಹ. ದಾಸಪ್ಪನವರು, ಅರಸೀಕೆರೆ.
,, ಜೆ. ತಿರುನಾರಣಯ್ಯಂಗಾರ್ರವರು, ಚನ್ನರಾಯಪಟ್ಟಣ.
,, ನಂಜಂಣನವರು, ಚನ್ನರಾಯಪಟ್ಟಣ.
,, ಸೂರ್ಯನಾರಾಯಣಶೆಟ್ಟರು, ಅರಕಲಗೂಡು.
,, ಮಹಲಿಂಗೆಗೌಡರು, ಅರಕಲಗೂಡು.
,, ಅಬ್ದುಲ್ಲಾಸಾಬರು, ಅರಕಲಗೂಡು

ಗೈರ್ ಹಾಜರು.

ನಾರ್ ಅಫಿಷಿಯಲ್ ಮೆಂಬರುಗಳು.

ಮಿ|| ಡಬ್ಲ್ಯೂ. ಎಲ್. ಕಾಫರ್ಡ್ ಸಾಹೇಬರವರು, ಮಂಜರಾಬಾದ್.
,, ಐಗೂರು ಮಲ್ಲೇಗೌಡರು, ಮಂಜರಾಬಾದು.
,, ಹಬೀಬುಲ್ಲಸಾಬರು, ಬೇಲೂರು.
,, ಕೆಂಚರಾಯ ಶೆಟ್ಟರು, ಅರಸೀಕೆರೆ.
,, ವೆಂಕಟರಾಮೈಯ್ಯನವರು, ಹೊಳೇನರಸೀಪುರ.
,, ಕೊ. ರಾಮಕಟ್ಟರು, ಹೊಳೇನರಸೀಪುರ.
,, ಧರಣೈಯ್ಯಶೆಟ್ಟರು, ಚನ್ನರಾಯಪಟ್ಟಣ.

I. (1) ಅರಹಳ್ಳಿ—ಚೀಕನಹಳ್ಳಿ ರಸ್ತೆಯನ್ನು ಚಿಕ್ಕಮಗಳೂರು ವರಿಗೆ ಬಡಾವಣೆ ಮಾಡುವ ವಿಚಾರದಲ್ಲಿ 25—2—09ರ ಮಂಗಳವಾರದಲ್ಲಿ ನಡೆದ ಡಿಸ್ಟ್ರಿಕ್ಟು ಬೋರ್ಡು ಮಿಾಟಿಂಗಿನ VIIನೆ ತೀರ್ಮಾನವನ್ನು ಓದಲಾಯಿತು.

(2) ಚೀಕನಹಳ್ಳಿಯಿಂದ ಬೇಲೂರುಮೇಲೆ ಚಿಕ್ಕಮಗಳೂರಿಗೆ ಹೋಗತಕ್ಕ ರಸ್ತೆಯು ಪ್ರಸಕ್ತವಾದ ರಸ್ತೆಗಿಂತಲೂ ಚನ್ನಾಗಿರುವದರಿಂದ ಈ ರಸ್ತೆಯಮೇಲೆ ಸಂಚಾರ ಹೆಚ್ಚಾಗಿರುತ್ತೆಂತಲೂ ಮತ್ತು ಪ್ರಸಕ್ತವಾದ ರಸ್ತೆ ಬಡಾವಣೆಗೆ ವಿಶೇಷವಾಗಿ ಹಣ ಬೇಕಾಗುವದರಿಂದಲೂ ಅಲ್ಲದೆ ಇದನ್ನು ಸರಿಯಾದ ಸ್ಥಿತಿಯಲ್ಲಿಟ್ಟುಕೊಳ್ಳುವದಕ್ಕೆ ಡಿಸ್ಟ್ರಿಕ್ಟು ಫಂಡ್ಸಿನಿಂದ ಹೆಚ್ಚಾಗಿ ಹಣ ಖರ್ಚು ಮಾಡಬೇಕಾಗಿರುವದರಿಂದಲು ಈ ರಸ್ತೆ ಬಡಾವಣೆ ಮಾಡತಕ್ಕದ್ದು ಅವಶ್ಯಕವಿಲ್ಲವೆಂದು ಅಭಿಪ್ರಾಯಪಟ್ಟರುವ ಹಾಸನ ಡಿವಿಜ್ ಎಗ್ಜಿಕ್ಯೂಟಿವ್ ಇಂಜನಿಯರವರ ಬಾಬತು 23-29—3—09ರ ಮಂಗಳವಾರ 104ನೆ ನಂಬರು ಡಾಕೆಟ್ ಓದಲಾಯಿತು.

ತೀರ್ಮಾನ—ಡಿಸ್ಟ್ರಿಕ್ಟು ಫಂಡ್ಸ್ ಕವ್ಮಿಯಾಗಿರುವದರಿಂದ ಹಾಲಿ ಈ ರಸ್ತೆ ಕೆಲಸವನ್ನು ಮಾಡಿಸಲು ಆಗಲಾರದು. ಆದರೆ ಖಾಲಿ ಚೀಕನಹಳ್ಳಿಯಿಂದ ಬೇಲೂರುಮೇಲೆ ಚಿಕ್ಕಮಗಳೂರಿಗೆ ಹೋಗತಕ್ಕ ರಸ್ತೆಯ ಫಾಸಲೆಯು 24 ಮೈಲಿಗಳಾಗುವದರಿಂದಲೂ ಹೊಸದಾಗಿ ಮಾಡಬೇಕೆಂಬ ರಸ್ತೆ ಫಾಸಲೆಯು 18 ಅಥವಾ 19 ಮೈಲಿಗಳು ಆಗುತ್ತವೆಯಾಗಿ ಈ ಹೊಸ ರಸ್ತೆ ಮಾಡಿಸತಕ್ಕದ್ದು ಅತ್ಯವಶ್ಯಕವೆ ಎಂಬ ವಿಚಾರದಲ್ಲಿ ಬೇಲೂರು ತಾಲ್ಲೂಕು ಬೋರ್ಡಿನವರ ಅಭಿಪ್ರಾಯ ತರಿಸಬೇಕೆಂತ ತೀರ್ಮಾನಿಸಲಾಯಿತು.

II. (a) 3—4—09ರ ಮಂಗಳವಾರ ಆರ್. 7948-58—ಅಗ್ರಿ. 164 08-7ನೆ ನಂಬರು ಗವರ್ನಮೆಂಟ್ ಪ್ರೊಸೀಡಿಂಗ್ಸಿನಲ್ಲಿ ತಿಪ್ಪೂರು-ಚನ್ನರಾಯಪಟ್ಟಣ ರಸ್ತೆಗೆ ಸ್ಪೆಷಲ್ ರಿಪೇರಿಗೋಸ್ಕರ ಮಂಜೂರಾಗಿರುವ 5,000 ರೂಪಾಯಿಗಳನ್ನು ಡಿಸ್ಟ್ರಿಕ್ಟು ಫಂಡ್ಸಿನಿಂದ ಕೊಡತಕ್ಕ ವಿಚಾರದಲ್ಲಿ ಡಿಸ್ಟ್ರಿಕ್ಟು ಬೋರ್ಡಿನವರ ತೀರ್ಮಾನ ನಿಕಿ ಜವಾಬು ಬೆಳಸಬೇಕೆಂಬ ಜನರಲ್ ಮತ್ತು ರೆವಿನ್ಯೂ ಸೆಕ್ರಿಟೆರಿಯವರ 22—4—09ರ ಮಂಗಳವಾರ 10443—ಎಲ್. ಬಿ. 160 08-11ನೆ ಡಾಕೆಟ್ ಓದಲಾಯಿತು.

(b) 1909ನೆ ಇಸವಿ ಮಾರ್ಚಿ ಆಖೈರು ವರಿಗಿನ ಡಿಸ್ಟ್ರಿಕ್ಟ್ ಫಂಡ್ಸಿನ ಜಮಾ ಖರ್ಚು ಬಾಬತು ಲೆಖ್ಖಗಳನ್ನು ಓದಲಾಯಿತು.

ತೀರ್ಮಾನ—ಹಾಲಿ ಕ್ಷಾಮಮಗಾಲವಾಗಿರುವಪ್ರಯುಕ್ತ ವಸೂಲಿಯು ಬಹಳ ಕಮ್ಮಿಯಾಗಬಹುದಾಗಿರುತ್ತೆ. ಆದ್ದರಿಂದ ಡಿಸ್ಟ್ರಿಕ್ಟ್ ಫಂಡ್ಸಿನಿಂದ 5,000 ರೂಪಾಯಿಗಳನ್ನು ಕೊಡಲು ಸಾಧ್ಯವಿಲ್ಲ. ಈ ರಿಲೀಫ್ ಕೆಲಸಕ್ಕಾಗಿ ಡಿಸ್ಟ್ರಿಕ್ಟ್ ಫಂಡ್ಸಿಗೆ ಗ್ರಾಂಟ್-ಇನ್-ಏಡು ತರೀಕು ಹಣ ಕೊಡಲೋಸ್ಕರ ಈ ಸಂಬಳ್ಗಳನ್ನು ಗವರ್ನಮೆಂಟಿನವರ ಜಾಹಿರಾತಿಗೆ ತರತಕ್ಕದ್ದೆಂತ ತೀರ್ಮಾನಿಸಲಾಯಿತು.

III. (a) ಈ ಕ್ಷಾಮಕಾಲದಲ್ಲಿ ಕುಡಿಯುವ ನೀರಿನ ಭಾವಿಗಳು ತೆಗಿಸುವದಕ್ಕೆ ಮತ್ತು ಸರ್ವಜನೋಪಯುಕ್ತವಾದ ಇತರ ಕೆಲಸಗಳಿಗೋಸ್ಕರ 3,000, 4,000 ಮತ್ತು 1,000 ರೂಪಾಯಿಗಳು ಸಹಾ ಕೊಟ್ಟಿರುತ್ತೆಂಬ ರೆವಿನ್ಯೂ ಕಮಿಸನರ್ ಸಾಹೇಬರವರ 10-2-09ರ ಮುಸ್ತಂ 107—D, 13—17-2-09ರ ಮುಸ್ತಂ 1031-38—D ಮತ್ತು 16-4-09ರ ಮುಸ್ತಂ 2130—Dನೆ ನಂಬರು ಮೆಮೋಗಳು ಪರಾಂಬರಿಸಲಾಯಿತು.

(b) ಮೇಲೆ ಸಮೂಹಿಸಿರುವ ವೊಬಲಗನ್ನು ಡಿಸ್ಟ್ರಿಕ್ಟ್ ಫಂಡ್ಸಿಗೆ ಗ್ರಾಂಟ್-ಇನ್-ಏಡ್ ಆಗಿ ಭಾವಿಸತಕ್ಕದ್ದೆಂಬ ಕಂಟ್ರೋಲರವರ 30—3—09ರ ಮುಸ್ತಂ 5664-42ನೆ ನಂಬರು ಡಾಕೆಟ್ ಓದಲಾಯಿತು.

(c) ಮೇಲ್ಕಂಡ ಅಲಾಟ್‌ಮೆಂಟು ಪೈಕಿ ಡೆಪ್ಯುಟಿ ಕಮಿಷನರವರಿಂದ ಮಂಜೂರ್ಮಾಡಲ್ಪಟ್ಟ ಕೆಲಸಗಳ ಲೀಸ್ಟು ಓದಲಾಯಿತು.

ತೀರ್ಮಾನ—ಓದಿ ಏಲೆ ಇಡಿಸಲಾಯಿತು. ಮತ್ತು ಈ ವೊಬಲಗನ್ನು ಡಿಸ್ಟ್ರಿಕ್ಟ್ ಫಂಡ್ಸಿಗೆ ಗ್ರಾಂಟ್-ಇನ್-ಏಡಾಗಿ ಕೊಟ್ಟಿದ್ದಕ್ಕೆ ಗವರ್ನಮೆಂಟಿಗೆ ಬೋರ್ಡಿನವರ ವಂದನೆಯನ್ನು ತಿಳಿಸಬೇಕಾಗಿ ತೀರ್ಮಾನಿಸಲಾಯಿತು. ಮತ್ತು ಈ ಕ್ಷಾಮ ಕಾಲದಲ್ಲಿ ಅತ್ಯವಶ್ಯಕವಾದ ಕೆಲಸಗಳನ್ನು ಡೆಪ್ಯುಟಿ ಕಮಿಷನರ್ ಮತ್ತು ಪ್ರೆಸಿಡೆಂಟರು ಮಂಜೂರ್ಮಾಡಿರುವದನ್ನು ಸಹಾ ಅನುಮೋದಿಸಿರುತ್ತೆಂದು ಸಹಾ ತೀರ್ಮಾನಿಸಲಾಯಿತು.

IV. ಕಬ್ಯಾಲು ಗ್ರಾಮಸ್ಥರು ಕೊಟ್ಟಿರುವ ಕಂಟ್ರಿಬ್ಯೂಷನ್ ವೊಬಲಗೆನ್ನ ಡಿಸ್ಟ್ರಿಕ್ಟ್ ಫಂಡ್ಸಿಗೆ ಜಮಾ ಕೊಟ್ಟು ಚಾಲ್ತಿ ಸಾಲಿನ ಡಿಸ್ಟ್ರಿಕ್ಟ್ ಫಂಡ್ ಬಜ್ಜೆಟ್ಟಿನ ಯಾವ ಹೆಡ್ಡಿನಲ್ಲಿ ಈ ಅಂದಾಜು ವೊಬಲಗು 800 ರೂಪಾಯಿಯನ್ನು ಖರ್ಚು ಆಕಬಹುದೆಂಬುವದನ್ನ ತಿಳಿಸಬೇಕೆಂದು ಇಂದ ಜನರಲ್ ಮತ್ತು ರೆವಿನ್ಯೂ ಸೆಕ್ರಿಟರಿಯವರ 17—4—09ರ ಮುಸ್ತಂ 10247—ಲೋ. ಬೋ. 350-08ನೆ ನಂಬರು ಚೀಟಿಕೆಟ್ ಓದಲಾಯಿತು.

ತೀರ್ಮಾನ—ಈ ಅಂದಾಜು ವೊಬಲಗು 800 ರೂಪಾಯಿಗಳನ್ನು ಕೊಡುವದಕ್ಕೆ ಚಾಲ್ತಿ ಸಾಲ್ ಡಿಸ್ಟ್ರಿಕ್ಟ್ ಫಂಡ್ ಬಜ್ಜೆಟ್ಟಿನಲ್ಲಿ ಅವಕಾಶವಿಲ್ಲವಾಗಿ ಡಿಸ್ಟ್ರಿಕ್ಟ್ ಫಂಡ್ಸಿಗೆ ಜಮಾ ಆಗುವ ಈ ಕಂಟ್ರಿಬ್ಯೂಷನ್ ವೊಬಲಗಿನಲ್ಲಿ ಪ್ರಸಕ್ತವಾದ ಅಂದಾಜು ಮಂಜೂರ್ಮಾಡಬಹುದಾಗಿ ಗವರ್ನಮೆಂಟಿಗೆ ಖರಿನಬಹುದಾಗಿ ತೀರ್ಮಾನಿಸಲಾಯಿತು ಮತ್ತು ಗವರ್ನಮೆಂಟಿನವರು ಹೇಳುವ ರೀತಿ ಮಾಡಲು ಸಾಧ್ಯವಿಲ್ಲದಿರುವ ಭಾಗದಲ್ಲಿ ಸಹಾ ಗವರ್ನಮೆಂಟಿಗೆ ಬಂದು ಸ್ಪೆಷಲ್ ರಿಪೋರ್ಟು ಜಾಹಿರ್ಮಾಡಿಕೊಳ್ಳಬೇಕಾಗಿ ಸಹಾ ತೀರ್ಮಾನಿಸಲಾಯಿತು.

V. ಮೈಸೂರು ಸೀಮೆಯ ಕೆರೋಡಿ ಟೋಲ್ ಗೇಟ್ ಮೂಲಕವಾಗಿ ಅಥವಾ ಕೊಡಗು ಸೀಮೆಯ ಯಡೆಹಳ್ಳಿ ಟೋಲು ಗೇಟ್ ಮೂಲಕವಾಗಲಿ ಗಾಡಿ ವಗೈರೆಗಳು ಮೊದಲು ಸುಂಕ ಕೊಟ್ಟು ಇಪ್ಪತ್ತುನಾಲ್ಕು ಘಂಟೆ ಒಳಗೆ ಇನ್ನೊಂದು ಟೋಲು ಗೇಟ್ ಮೂಲಕ ಹೋಗುವಾಗ್ಗೆ ಪುನಹ ಸುಂಕ ಕೊಡಬೇಕಿಲ್ಲವೆಂಬುವದನ್ನು ಹಾಸನ ಡಿಸ್ಟ್ರಿಕ್ಟ್ ಬೋರ್ಡಿನವರಿಗೆ ಅನುಮೋದಿಸುವಂತೆ ಮೈಸೂರು ಗವರ್ನಮೆಂಟಿನವರು ತಿಳುವಳಿಕೆ ಕೊಡುತ್ತೆಂಬುವದನ್ನ ಕೊಡಗು ಡಿಸ್ಟ್ರಿಕ್ಟ್ ಬೋರ್ಡಿನವರು ಒಪ್ಪಿರುತ್ತಾರೆಂತಲು ಆದರೆ 1909ನೆ ಏಪ್ರೆಲ್ ಲಾಗಾಯಿತು 1911ನೆ ಮಾರ್ಚಿ ಆಖೈರಿಗಾಗುವ 2 ಸಾಲುಗಳಿಗೆ ಕೊಡಗು ಗವರ್ನಮೆಂಟಿನವರು ಯಡೆಹಳ್ಳಿ ಟೋಲು ಗೇಟನ್ನು ಹರಾಜು ಮಾಡಿರುವ ಪ್ರಯುಕ್ತ 1911ನೆ ಏಪ್ರೆಲ್ ಮಾಹೆ ಗುರ್ತಿ ಲಾಗಾಯಿತು ಮೇಲ್ಕಂಡಂತೆ ಜಾರೀಲಿ ತರಬಹುದೆಂಬ ಕೊಡಗು ಡಿಸ್ಟ್ರಿಕ್ಟ್ ಬೋರ್ಡಿನವರ ಅಭಿಪ್ರಾಯವನ್ನು ಈ ಬೋರ್ಡಿನಲ್ಲಿಟ್ಟು ಚರ್ಚಿಸಿ ತೀರ್ಮಾನದ ನಕಲು ನಿಖಿ ಜವಾಬು ಬೆಳಿಸಬೇಕಂಬ ಜನರಲ್ ಮತ್ತು ರೆವಿನ್ಯೂ ಸೆಕ್ರಿಟರಿಯವರಿಂದ ತಲ್ಪಿದ 19—4—09ರ ಮುಸ್ತಂ 10333—ಲೋ. ಬೋ. 123-08-6ನೆ ನಂಬರ್ ಖತ್ತು ಓದಲಾಯಿತು.

ತೀರ್ಮಾನ—ಕೊಡಗು ಡಿಸ್ಟ್ರಿಕ್ಟ್ ಬೋರ್ಡಿನವರು 1911ನೆ ಎಪ್ರೆಲ್ ಗುರ್ತಿ ಲಾಗಾಯಿತು ಜಾರೀಲಿ ಕೊಡಲು ಒಪ್ಪಿರುವ ಅಂಶದಲ್ಲಿ ಈ ಡಿಸ್ಟ್ರಿಕ್ಟ್ ಬೋರ್ಡಿನವರಿಗೆ ಯಾವ ಆಭ್ಯಂತರವಿಲ್ಲವೆಂತಲು, ಈ ಮಧ್ಯೆ ಕೆರೋಡಿ ಟೋಲು ಗೇಟ್ ಹರಾಜು ಮಾಡುವಾಗ್ಗೆ ಯಡೆಹಳ್ಳಿ ಟೋಲು ಗೇಟಿನಲ್ಲಿ ಸುಂಕ ಕೊಟ್ಟಿದ್ದಾಗ್ಗೂ ಕೆರೋಡಿ ಗೇಟಿನಲ್ಲಿ ಪುನಹ ಕೊಡಬೇಕೆಂತಲು 1914ನೆ ಏಪ್ರೆಲ್, ಮೇ ಮತ್ತು ಜೂನ್ ಮಾಹೆಗಳಲ್ಲಿ ಕೊಡಗು ಡಿಸ್ಟ್ರಿಕ್ಟ್ ಬೋರ್ಡಿನ ಯಡೆಹಳ್ಳಿ ಟೋಲು ಗೇಟಿನಲ್ಲಿ ಸುಂಕ ವಸೂಲ್ಮಾಡಿದಲ್ಲಿ 24 ಘಂಟೆ ಒಳಗೆ ಈ ಗೇಟಿನಲ್ಲಿ ವಸೂಲ್ಮಾಡುವದಿಲ್ಲವೆಂಬ ಷರತ್ತಿನ ಮೇಲೆ ಸದರಿ ಗೇಟನ್ನು ಹರಾಜು ಮಾಡಿಸಬಹುದೆಂತ ತೀರ್ಮಾನಿಸಲಾಯಿತು.

VI. ತಿಪ್ಪೂರು-ಚನ್ನರಾಯಪಟ್ಟಣದ ರಸ್ತೆ ಮೇಲೆ ಕಾರಹಳ್ಳಿ ಬಳಿ ಒಂದು ಟೋಲು ಗೇಟ್ ಸ್ಥಾಪಿಸಿ ಇದರಲ್ಲಿ ಉತ್ಪತ್ತಿಯಾಗುವ ಟೋಲನ್ನು ಸಮವಾಗಿ ಹಂಚಿದಲ್ಲಿ ತಪ್ಪಕ್ಕ ಡಿಸ್ಟ್ರಿಕ್ಟಿನ ಎಲ್ಲಿಯಲ್ಲಿರುವ ಈ ರಸ್ತೆಯನ್ನು ಈಗಿನ ಸ್ಥಿತಿಗಿಂತಲು ಚನ್ನಾದ ಸ್ಥಿತಿಯಲ್ಲಿಟ್ಟುಕೊಳ್ಳಲು ಸಾಧ್ಯವಾಗುತ್ತೆಯಾಗಿ ಮೇಲ್ಕಂಡಂತೆ ಕಾರಹಳ್ಳಿ ಬಳಿ ಟೋಲು ಗೇಟ್ ಸ್ಥಾಪಿಸುವದಕ್ಕೆ ತುಪ್ಪೂರುತ್ತೆಂದು ತುಮಕೂರು ಡಿಸ್ಟ್ರಿಕ್ಟ್ ಬೋರ್ಡಿನವರು ಮಾಡಿದ ತೀರ್ಮಾನದ ಕಾಪಿಯನ್ನು ಕಳುಹಿಸಿರುತ್ತೆಂದು ತಿಳಿದ ತುಮಕೂರು ಡಿಸ್ಟ್ರಿಕ್ಟ್ ಪ್ರೆಸಿಡೆಂಟರವರ 22-2-09—2-ನೆರ ಮುಸ್ತಂ 1162—ಮಿಸ್. ನೆ ನಂಬರು ಡಾಕೆಟ್ ಓದಲಾಯಿತು.

ತೀರ್ಮಾನ—ಕಾರಹಳ್ಳಿ ಪೊಲೀಸ್ ಸ್ಟೇಷನ್ ಬಳಿ 1909ನೆ ಜುಲೈ ಗುರ್ತಿ ಲಾಗಾಯಿತು ಒಂದು ಟೋಲು ಗೇಟನ್ನು ಸ್ಥಾಪಿಸುವ ವಿಚಾರದಲ್ಲಿ ಗವರ್ನಮೆಂಟಿಗೆ ಸಿಫಾರಸು ಮಾಡಬೇಕಾಗಿಯೂ ಇದನ್ನು ಒಂದು ವರುಷದ ವರಿಗೂ ಅಮಾನಿಯಾಗಿ ನಡಿಸಬೇಕಾಗಿಯು ಇದಕ್ಕೆ ಈ ಕೆಳಗೆ ನಮೂದಿಸಿರುವ ಮೇರೆ ಬೇಕಾಗುವ ಸಿಬ್ಬಂದಿಯ ಖ

ಚರ್ಚು 600 ರೂಪಾಯಿಗಳನ್ನು 1909–10ನೆ ಸಾಲ್ ಬಜೆಟ್ಟಿನಲ್ಲಿ X ಮಿಸಲೇನಿಯಸ್ (8) Unforeseen ಖರ್ಚು ಎಂಬ ಹೆಡ್ಡಿನಲ್ಲಿ ದಾಖಲ್ಮಾಡಿರುವ 950 ರೂಪಾಯಿಗಳ ಪೈಕಿ ಉಪಯೋಗಿಸಿಕೊಳ್ಳಬೇಕೆಂತಲೂ ಆದರೆ ಗವರ್ನಮೆಂಟಿನವರು ತಮ್ಮ 28—4—09ರ ಮುಕ್ಕಂ 10681-94—ಲೋ. ಬೋ. 313-08ನೆ ನಂಬರು ಆರ್ಡರಿನಲ್ಲಿ ಈ 950 ರೂಪಾಯಿಗಳನ್ನು ವಜಾ ಮಾಡಿರುವದರಿಂದ ಮೇಲ್ಕಂಡ ಖರ್ಚಿಗೋಸ್ಕರ ಇದನ್ನ ಪ್ರನಹಾ ಮುಂಜೂರ್ಮಾಡಬೇಕಾಗಿ ಗವರ್ನಮೆಂಟಿಗೆ ಬರಿಸಬೇಕೆಂತ ಸಹಾ ತೀರ್ಮಾನಿಸಲಾಯಿತು.

	ರೂ.	ಆ.	ಪೈ.
2 ಟೋಲು ಗೇಟು ಕಟ್ಟುತಕ್ಕ ಬಗ್ಗೆ	180	0	0
ಮಾಹೆಯಾನ 10 ರೂಪಾಯಿ ತಲಬಿನಮೇಲೆ 3 ಜನ ಮುತ್ಸದ್ದಿಗಳಿಗೆ ...	360	0	0
ಕರ್ಟಿಜೆಂಟ್ ಖರ್ಚು ಮಾಹೆಯಾನ 5 ರೂಪಾಯಿ ಮೇರೆ ...	60	0	0
	600	0	0

VII. (a) ಬಿಸಲೆ 3ನೆ ಕ್ಲಾಸ್ ಟ್ರಾವಲರ್ಸ್ ಬಂಗ್ಲಾಕ್ಕೆ ರಿಪೇರಿ ಕೆಲಸವು ಅತ್ಯವಶ್ಯಕವಾಗಿ ಆಗಬೇಕಾಗಿರುತ್ತೆಂಬ ಸಕಲೇಶಪುರದ ಅಸಿಸ್ಟೆಂಟ್ ಕಮಿಷನರವರ 12—4—09ರ ಮುಕ್ಕಂ 740ನೆ ನಂಬರ್ ಲೆಟರು ಓದಲಾಯಿತು.

(b) ಬಿಸಲೆ III ನೆ ಕ್ಲಾಸ್ ಟ್ರಾವಲರ್ಸ್ ಬಂಗ್ಲಾಕ್ಕೆ ಅತ್ಯವಶ್ಯಕವಾಗಿ ಬೇಕಾಗಿರುವ ರಿಪೇರಿ ಕೆಲಸಗಳಿಗೋಸ್ಕರ 480 ರೂಪಾಯಿಗೆ ಒಂದು ಅಂದಾಜು ತಯಾರ್ಮಾಡಿಸಿ ಕೌಂಟರ್ ಸೈನಾಗಿ ವಾಪಸು ಮಾಡತಕ್ಕ ಬಗ್ಗೆ ಅಂದಾಜನ್ನು ಕಳುಹಿಸಿರುತ್ತೆಂತಲು ಮತ್ತು ಈ ಕೆಲಸಕ್ಕೆ ಹಣ ಒದಗಿಸಿಕೊಡಬೇಕೆಂತಲು ಬಂದ ಹಾಸನ ಡಿಸ್ಟ್ರಿಕ್ಟ್ ಎಗ್ಜಿಕ್ಯೂಟಿವ್ ಇಂಜನಿಯರವರ 15—3—09ರ ಮುಕ್ಕಂ 81ನೆ ನಂಬರು ಡಾಕೆಟ್ ಓದಲಾಯಿತು.

(c) ಮಾರ್ನಹಳ್ಳಿ 3ನೆ ಕ್ಲಾಸ್ ಟ್ರಾವಲರ್ಸ್ ಬಂಗ್ಲಾಕ್ಕೆ ರಿಪೇರಿಯು ಅತ್ಯವಶ್ಯಕವೆಂಬ ಸಕಲೇಶಪುರದ ಅಸಿಸ್ಟೆಂಟ್ ಕಮಿಷನರವರ 24—3—09ರ ಮುಕ್ಕಂ 805ನೆ ನಂಬರು ಲೆಟರ್ ಓದಲಾಯಿತು.

(d) ಕೆಂಪಕಲ್ಲು 3ನೆ ಕ್ಲಾಸ್ ಟ್ರಾವಲರ್ಸ್ ಬಂಗ್ಲಾಕ್ಕೆ ರಿಪೇರಿಯು ಜರೂರಾಗಿ ಆಗಬೇಕಾಗಿರುತ್ತೆಂಬ ಸಕಲೇಶಪುರದ ಅಸಿಸ್ಟೆಂಟ್ ಕಮಿಷನರವರ 22-24—4—09ರ ಮುಕ್ಕಂ 804ನೆ ನಂಬರ್ ಡಾಕೆಟ್ ಮತ್ತು ಇದೇ ವಿಚಾರದಲ್ಲಿ ಬಂದ ಎಗ್ಜಿಕ್ಯೂಟಿವ್ ಇಂಜನಿಯರವರ 1—5—09ರ ಮುಕ್ಕಂ 159ನೆ ನಂಬರು ಡಾಕೆಟ್ ಸಹಾ ಓದಲಾಯಿತು.

ತೀರ್ಮಾನ—ಈಚಿನ ಕೆಲವು ವರುಷಗಳ ಅನುಭವದಲ್ಲಿ ಈ ಡಿಸ್ಟ್ರಿಕ್ಟಿನಲ್ಲಿರುವ 3ನೆ ಕ್ಲಾಸ್ ಟ್ರಾವಲರ್ಸ್ ಬಂಗ್ಲಾಗಳನ್ನು ಸಿಕೊಂಡಿರುವ ಮಲಪೂಳಿ ಲೀಸ್ಟಿನಲ್ಲಿ ನಮೂದಿಸಿರುವ ಅನೇಕ ಕಟ್ಟಡಗಳ ರಿಪೇರಿಗೋಸ್ಕರ ಡಿಸ್ಟ್ರಿಕ್ಟ ಫಂಡಿನಿಂದ ಹಣ ಒದಗಿಸಲು ಅಸಾಧ್ಯವೆಂದು ತಿಳಿಯಬಂದಿರುವದರಿಂದ ಪೂರ್ವದಲ್ಲಿ ಇನ್‌ಸ್ಪೆಕ್ಷ್ ಲಾಡ್ಜ್‌ಗಿದ್ದ ಕಟ್ಟಡಗಳನ್ನು ಮತ್ತು ಪ್ರೊವಿಷಿಯಲ್ ರೋಡಿನಲ್ಲಿರತಕ್ಕ 3ನೆ ಕ್ಲಾಸ್ ಟ್ರಾವಲರ್ಸ್ ಬಂಗ್ಲಾಗಳನ್ನು ಸಹಾ ಮರಹಮ್ಮತ್ತು ಇಲಾಖೆಗೆ ವಹಿಸಿಕೊಟ್ಟು ಇವುಗಳ ರಿಪೇರಿ ಲಾಗವಡು ಪ್ರೊವಿಷಿಯಲ್ ಫಂಡಿನಿಂದ ಕೊಡುವದಕ್ಕೆ ಏರ್ಪಾಡಾಗುವ ಬಗ್ಗೆ ಗವರ್ನಮೆಂಟ್ ಮುಂಜೂರಾತಿ ಪಡಿಯತಕ್ಕದ್ದೆಂದು ತೀರ್ಮಾನಿಸಲಾಯಿತು.

VII. ಮೊದಲು ಇನ್‌ಸ್ಪೆಕ್ಷ್ ಲಾಡ್ಜುಗಳಾಗಿದ್ದು ಈಚೆಗೆ 3ನೆ ಕ್ಲಾಸ್ ಟ್ರಾವಲರ್ಸ್ ಬಂಗ್ಲಾಗಳಾಗಿರುವದು.

(1) ಬಿಸಲೆ—ಮಂಜರಾಬಾದ್ ತಾಲ್ಲೂಕು, ಗಂಡಹಳ್ಳಿ—ಬೇಲೂರು ತಾಲ್ಲೂಕು, ನುಗ್ಗೆಹಳ್ಳಿ—ಚನ್ನರಾಯಪಟ್ಟಣ ತಾಲ್ಲೂಕು.

(2) ಪ್ರೊವಿಷಿಯಲ್ ರೋಡುಗಳ ಮೇಲೆ ಇರುವ 3ನೆ ಕ್ಲಾಸ್ ಟ್ರಾವಲರ್ಸ್ ಬಂಗ್ಲಾಗಳು ಬೆಂಗಳೂರು-ಮಂಗಳೂರು ರಸ್ತೆ.

ಹಿರಿಸಾವೆ—ದಂಡಿಗನಳ್ಳಿ—ಚನ್ನರಾಯಪಟ್ಟಣ ತಾಲ್ಲೂಕು, ಮಾರ್ನಹಳ್ಳಿ—ಕೆಂಪಹೊಳೆ—ಮಂಜರಾಬಾದ್ ತಾಲ್ಲೂಕು.

(3) ಬಾಣಾವರ—ಮೂಡಿಗೆರೆ ರೋಡು, ಬಾಣಾವರ—ಅರಸೀಕೆರೆ ತಾಲ್ಲೂಕು.

(4) ಹಾಸನ-ಚಿಕ್ಕಮಗಳೂರು ರಸ್ತೆ, ಹಗರೆ—ಬೇಲೂರು ತಾಲ್ಲೂಕು.

ಮೇಲ್ಕಂಡಂತೆ ಏರ್ಪಾಡಾಗದೆ ಹೋದಲ್ಲಿ ಈ ಕಟ್ಟಡಗಳಿಗೆ ರಿಪೇರಿ ಕೆಲಸವು ನಡಿಯದೆ ಕಡೆಗೆ ಇವುಗಳು ಬಿದ್ದುಬಿಡಲು ಅವಕಾಶವಾಗುತ್ತೆಂಬ ವಿಚಾರ ಗವರ್ನಮೆಂಟಿನ ಜಾಹಿರಕ್ಕೆಗೆ ತರಬೇಕೆಂದು ಸಹಾ ತೀರ್ಮಾನಿಸಲಾಯಿತು.

VIII. 1909—10ನೆ ಸಾಲಿನಲ್ಲಿ ಬೇಲೂರು, ಅರಸೀಕೆರೆ, ಬಾಣಾವರ, ಸಕ್ಲೇಶಪುರ, ಯಸಳೂರು ಪೇಟೆ, ಅರಹಳ್ಳಿ, ಮತ್ತು ಆಲೂರು ಲೋಕಲ್ ಫಂಡ್ ಡಿಸ್ಪೆನ್ಸರಿ ಕಟ್ಟಡಗಳಿಗೆ ರಿಪೇರಿಗೋಸ್ಕರ ಮತ್ತು ಅರ್ಕಲಗೂಡು ಲೋಕಲ್ ಫಂಡ್ ಡಿಸ್ಪೆನ್ಸರಿಗೆ ಕಲ್ಲು ಹಾಸುವದಕ್ಕು ಒಟ್ಟು ಡಿಸ್ಟ್ರಿಕ್ಟ ಫಂಡು ಕಂಟ್ರಿಬ್ಯೂಷ್ಯನ್ ಮೊಬಲಗು 407 ರೂಪಾಯಿ ಕೇರಿ 1,105 ರೂಪಾಯಿಗಳಿಗೆ ಅಂದಾಜುಗಳ ನಿಕಿ ಸ್ಟೇಟ್‌ಮೆಂಟ್ ಕಳುಹಿಸಿರುತ್ತೆಂಬ ಹಾಸನದ ಡಿವಿಜನ್ ಎಗ್ಜಿಕ್ಯೂಟಿವ್ ಇಂಜನಿಯರವರ 14-17—4—09ರ ಮುಕ್ಕಂ 132ನೆ ನಂಬರ್ ಡಾಕೆಟ್ ಓದಲಾಯಿತು.

ತೀರ್ಮಾನ—ಈ ಅಂದಾಜುಗಳನ್ನು ಕೌಂಟರ ಸೈನ್ ಮಾಡಿ ಸೀನಿಯರ್ ಸರ್ಜನ್ ಸಾಹೇಬರವರಿಗೆ ಕಳುಹಿಸಬೇಕೆಂದು ತೀರ್ಮಾನಿಸಲಾಯಿತು.

IX. ಹಗರೆ 3ನೆ ಕ್ಲಾಸು ಟ್ರಾವಲರ್ಸ್ ಬಂಗ್ಲಾ ರಿಪೇರಿಗಾಗಿ 23 ರೂಪಾಯಿಗೆ ಒಂದು ಅಂದಾಜ ಕಳುಹಿಸಿ ಈ ಲಾಗೋಡು ತಮ್ಮಲ್ಲಿ ಕೊಟ್ಟಿರುವ ಮೊಬಲಗಿನಲ್ಲಿ ಖರ್ಚು ಮಾಡುತ್ತೆಂಬ ಎಗ್ಜಿಕ್ಯೂಟಿವ್ ಇಂಜನಿಯರವರ 24-26—4—09ರ ಮುಕ್ಕಂ 144ನೆ ನಂಬರು ಡಾಕೆಟ್ ಓದಲಾಯಿತು.

ತೀರ್ಮಾನ—ಈ ಅಂದಾಜವನ್ನು 23 ರೂಪಾಯಿಗೆ ಕೌಂಟರ ಸೈನು ಮಾಡಿ ಎಗ್ಜಿಕ್ಯೂಟಿವ್ ಇಂಜಿನಿಯರಿಗೆ ವಾಪಸು ಮಾಡಬೇಕಾಗಿ ತೀರ್ಮಾನಿಸಲಾಯಿತು.

X. ಈ ಕೆಳಿಗೆ ನಮೂದಿಸಿ ಇರುವವುಗಳನ್ನು ಬೋರ್ಡಿನವರ ತಿಳುವಳಿಕೆ ಬಗ್ಗೆ ಓದಲಾಯಿತು.

(1) ಪಶುವೈದ್ಯಶಾಲೆಗಳ ಮೈಂಟೆನೆನ್ಸು ಖರ್ಚನ್ನು ಡಿಸ್ಟ್ರಿಕ್ಟು ಫಂಡ್ಸಿನಿಂದ ಕೊಡಬೇಕಾಗಿಯು ಆದರೆ ಈ ವೈದ್ಯಶಾಲಾಗಳು ಮುನಿಸಿಪಲ್ ಟವ್ನಲ್ಲಿದ್ದರೆ ಈ ಖರ್ಚಿನ $\frac{1}{3}$ ಭಾಗವನ್ನು ಮ್ಯುನಿಸಿಪಲ್ ಫಂಡ್ಸಿನಿಂದ ಕೊಡತಕ್ಕದ್ದೆಂಬ 5-4-09ರ ಮತ್ತು ಂ 9731-40—ಲೋ. ಬಿ. 455-07-35ನೆ ನಂಬರು ಗವರ್ನ್‌ಮೆಂಟ್ ಪ್ರೊಸೀಡಿಂಗ್ಸು ಓದಲಾಯಿತು.

(2) ರಾಜನ ಶಿರಿಸೂರುನಿಂದ ಹಳೇಪೇಡಿಗೆ ಹೋಗಿರತಕ್ಕ ರಸ್ತೆಯನ್ನು 100 ರೂಪಾಯಿ ಲಾಗೋಡು ಮುಟ್ಟಿಸಿ ಅಭಿವೃದ್ಧಿಪಡಿಸತಕ್ಕದ್ದನ್ನು (ಬಜ್ಜೆಟ್ಟಿನಲ್ಲಿ ದಾಖಲಾಗದಿರತಕ್ಕ ಕೆಲಸ) ಮಂಜೂರ್ಮಾಡಿರುತ್ತೆಂಬ 6-4-09ರ ಮತ್ತು ಂ 9793-4—ಲೋ. ಬೋ. 341-08-2ನೆ ನಂಬರ್ ಗವರ್ನ್‌ಮೆಂಟ್ ಪ್ರೊಸೀಡಿಂಗ್ಸು.

(3) ಏಳಲಿ ಗ್ರಾಮದಲ್ಲಿರುವ ಪಡಮುಕೋದ ಕೆರೆಯನ್ನು ಗೋಕಟ್ಟೆ ಮಾಡುವದು ಡಿಸ್ಟ್ರಿಕ್ಟು ಫಂಡು ಕಾಂಗಾರಿಯುಂತಲು ಆದ್ದರಿಂದ ಇದರ ಲಾಗೋಡು ಡಿಸ್ಟ್ರಿಕ್ಟು ಫಂಡ್ಸಿನಿಂದ ಕೊಡಬೇಕೆಂತಲು ಇಂಥಾ ಸಂದರ್ಭಗಳಲ್ಲಿ ಅವಶ್ಯಬಿದ್ದರೆ ಲೋಕಲ್ ಬೋರ್ಡ್‌ಗಳ ಮಿನಿಸುಮ್ ಬ್ಯಾಲನ್ಸನ್ನು ಹಣದಲ್ಲು ಹಣ ಖರ್ಚು ಮಾಡಬಹುದೆಂಬ 10-4-09ರ ಮತ್ತು ಂ 8361-71-ಆಗ್ರಿ. 152-08-5ನೆ ನಂಬರು ಪ್ರೊಸೀಡಿಂಗ್ಸು.

(4) ತಾಲ್ಲೂಕು ಬೋರ್ಡಿನವರ ತೀರ್ಮಾನವಿಲ್ಲದೆ ಡಿಸ್ಟ್ರಿಕ್ಟು ಫಂಡ್ಸು ವಿಲೆವಾರಿ ಮಾಡಕೂಡದೆಂಬ 13—4—09ರ ಮತ್ತು ಂ ರೆ. 8447-56—ಆಗ್ರಿ. 69-08-7ನೆ ನಂ ರ್ ಪ್ರೊಸೀಡಿಂಗ್ಸು.

(5) ಗ್ರಾಮದಲ್ಲಿ ನೀರಿನ ವಸತಿಗೋಸ್ಕರ 70 ರೂಪಾಯಿ ಮುಟ್ಟಿಸಿ ಕಲ್ಯಾಣಿಯು ಹೂಳು ತೆಗಿಸತಕ್ಕ ಮತ್ತು 9 ರೂಪಾಯಿ ಮುಟ್ಟಿಸಿ ಬಂದು ಭಾವಿಯನ್ನು ಆಳಮಾಡಿಸತಕ್ಕ ಈ ಎರಡು ಭಾವಿ ಕಾಂಗಾರಿಗಳನ್ನು ಮಂಜೂರ್ಮಾಡಿರುತ್ತೆಂಬ 17—4—09ರ ಮತ್ತು ಂ 10248-9—ಲೋ. ಬೋ. 154-08-12ನೆ ನಂಬರ್ ಪ್ರೊಸೀಡಿಂಗ್ಸು.

(6) ಕಣಕಟ್ಟೆ ಮತ್ತು ಕಿತ್ತನಕೆರೆ ಗ್ರಾಮುಗಳಲ್ಲಿ 100 ರೂ. ಲಾಗೋಡು ಮುಟ್ಟಿಸಿ ಪಾಪಾಸುಕಳ್ಳಿಯನ್ನು ತೆಗಿಯತಕ್ಕದ್ದನ್ನು (ಬಜ್ಜೆಟ್ಟಿನಲ್ಲಿ ದಾಖಲಾಗದಿರತಕ್ಕ ಕೆಲಸಗಳು) ಮಂಜೂರ್ಮಾಡಿರುತ್ತೆಂಬ 17—4—09ರ ಮತ್ತು ಂ 10252-4—ಲೋ. ಬೋ. 154-08-13ನೆ ನಂಬರ್ ಗವರ್ನ್‌ಮೆಂಟ್ ಪ್ರೊ ಡಿಂಗ್ಸು.

(7) ಹಾಸನದ ಮುನಿಸಿಪಲ್ ಕಛೇರಿಯಲ್ಲಿ 250 ರೂಪಾಯಿನಲ್ಲಿ ಬಂದು ಭಾವಿ ತೆಗಿಸುವವನ್ನ ಪೈಸಿಜೊಟರು ಮಂಜೂರ್ಮಾಡಿರುವದನ್ನು ಅನುಮೋದಿಸಿರುವಂಗಾಗಿ ಬಂದ 17—4—09ರ ಮತ್ತು ಂ 10255-8—ಲೋ. ಬೋ. 345-08-2ನೆ ನಂಬರು ಗವರ್ನ್‌ಮೆಂಟ್ ಪ್ರೊಸೀಡಿಂಗ್ಸು.

ತೀರ್ಮಾನ :—ಓದಿ ವಿಲೇ ಇಡಿಸಲಾಯಿತು.

XI. ಶಿವಮೊಗ್ಗ ಡಿಸ್ಟ್ರಿಕ್ಟು ಬೋರ್ಡು ಪೈಸಿಡೆಂಟರು ಸೂಚಿಸಿದಂತೆ ಪೈಸಿಡೆಂಟರ ಆಫೀಸು ಸಿಬ್ಬಂದಿಯನ್ನು ಇನ್ನೊಬ್ಬ ನವುಕರನನ್ನು ಕೊಡುವದರ ಮೂಲಕ ಹೆಚ್ಚು ಮಾಡುವದು ಅವಶ್ಯವಿಲ್ಲವೆಂಬ 19—4—09ರ ಮತ್ತು ಂ 10259-67-ಲೋ. ಬೋ. 199-08-4ನೆ ನಂಬರು ಗವರ್ನ್‌ಮೆಂಟ್ ಪ್ರೊಸೀಡಿಂಗ್ಸು.

ತೀರ್ಮಾನ—ಡಿಸ್ಟ್ರಿಕ್ಟು ಆಫೀಸಿನ ಲೋಕಲ್ ಫಂಡು ವತ್ತು ಮುನಿಸಿಪಲ್ ಇಲಾಖೆಯಲ್ಲಿ ನಡಿಯತಕ್ಕ ಕೆಲಸವು ಬಹಳ ಹೆಚ್ಚಾಗಿರುವದರಿಂದಲು ಮತ್ತು ಜವಾಬ್ದಾರಿ ಕೆಲಸವಾದ್ದರಿಂದಲು ಹೆಡ್ ಕ್ಲಾರ್ಕಿಗೆ ಹಾಲಿ ಇರತಕ್ಕ ತಲಬು 30—1—35 ಇತರ ಇಲಾಖಾ ಹೆಡ್ ಕ್ಲಾರ್ಕುಗಳಿಗೆ ಇರತಕ್ಕ ತಲಬು ನೋಡಿದರೆ ಇದು ಬಹಳ ಕಮ್ಮಿಯೆಂತಲೂ ಬೋರ್ಡಿನವರು ಅಭಿಪ್ರಾಯಪಡುತ್ತಾರಾಗಿಯೂ ಈ ನವುಕರಿ ತಲಬು 40-2-50 ರೂಪಾಯಿಗು ಇದು ಅನುಸರಿಸಿ ಬಾಕಿ ನಾಲ್ಕು ಕ್ಲಾರ್ಕುಗಳ ತಲಬನ್ನು ಸಹಾ ಹೆಚ್ಚು ಮಾಡಬಹುದಾಗಿ ಗವರ್ನ್‌ಮೆಂಟಿಗೆ ಬರಿಸಬಹುದಾಗಿ ತೀರ್ಮಾನಿಸಲಾಯಿತು.

XII. ಹಂದ್ರಾಳು ಗ್ರಾಮಸ್ಥರು ತಮ್ಮ ಗ್ರಾಮದಲ್ಲಿ ಕೆದುವ ಭಾವಿಯನ್ನು ತೆಗಿಸತಕ್ಕದ್ದು ಅವಶ್ಯವಿಲ್ಲವೆಂತಲೂ ಹಾಲಿ ಇರತಕ್ಕ ಹಳೆ ಳಿಯುವ ಭಾವಿಯನ್ನು ರಿಪೇರಿ ಮಾಡಿಸಿಕೊಡಬೇಕಾಗಿ ಮುಷ್ಕರ ಮಾಡುತಾ ರಾಗಿ ಈ ಗ್ರಾಮದಲ್ಲಿ ಬಂದು ಶೇದೋಭಾವಿ ತೆಗಿಯುವದಕ್ಕೆ ಈ ಮೊದಲೆ ಮಂಜೂರಾಗಿರುವ 330 ರೂಪಾಯಿ (ರೈತರು ಕೊಟ್ಟಿರುವ 150 ರೂಪಾಯಿ ಕಂಟ್ರಿಬ್ಯೂಷ್ಯನ್)ನ ಅಂದಾಜನ್ನು ಕ್ಯಾನ್ಸಲ್‌ಮಾಡಿ ಈ 330 ರೂಪಾಯಿಯನ್ನು ಜಾವಗಲ್ಲಿನಲ್ಲಿ ಬಂದು ಶೇದೋ ಭಾವಿ ಮತ್ತು ಇನ್ನೊಂದು ಳಿಯುವ ಭಾವಿ ಸಹಾ ತೆಗಿಸುವದಕ್ಕೆ ಉಪಯೋಗ ಮಾಡಿಕೊಳ್ಳಬಹುದೆಂಬ ಅರಸೀಕೆರೆ ತಾಲ್ಲೂಕು ಅಮಲ್ದಾರ್ರ 17—4—09ರ ಮತ್ತು ಂ 465-3870ನೆ ನಂಬರು ರಿಪೋರ್ಟು ಓದಲಾಯಿತು.

ತೀರ್ಮಾನ—ಜಾವಗಲ್ಲಿನಲ್ಲಿ ಬಂದು ಶೇದೋಭಾವಿಯನ್ನು ತೆಗಿಯತಕ್ಕ ಬಗ್ಗೆ 200 ರೂಪಾಯಿ ಮಂಜೂರ್ಮಾಡಿರುವದಾಗಿಯೂ ವತ್ತು ಉಳಿದ 130 ರೂಪಾಯಿಗಳು ರೈತರು ಕೊಟ್ಟಿರುವ ಕಂಟ್ರಿಬ್ಯೂಷ್ಯನ್ ಮೊಬಲಗು 150 ರೂಪಾಯಿ ಸಹಾ ಹಾಲಿ ಹಂದ್ರಾಳು ಗ್ರಾಮದಲ್ಲಿರತಕ್ಕ ಇಳಿಯುವ ಭಾವಿಯನ್ನೇ ಸರಿಪಡಿಸತಕ್ಕ ಬಗ್ಗೆ ಉಪಯೋಗಿಸಬೇಕೆಂತ ಸಹಾ ತೀರ್ಮಾನಿಸಲಾಯಿತು ಮತ್ತು ಈ ಬಜ್ಜೆಟ್ಟಿನಲ್ಲಿ ದಾಖಲ್ಮಾಡದೆ ಇರತಕ್ಕ ಕೆಲಸಕ್ಕೆ ಗವರ್ನ್‌ಮೆಂಟ್ ಮಂಜೂರಾತಿ ಪಡಿಯಬೇಕೆಂದು ಸಹಾ ತೀರ್ಮಾನಿಸಲಾಯಿತು.

XIII. ಮಾವಿಹಳ್ಳಿ ಹೋಬಳಿ ಚಿಲ್ಕೂರು ಗ್ರಾಮದಲ್ಲಿ ಬಂದು ಭಾವಿ ತೆಗಿಯತಕ್ಕ ಬಗ್ಗೆ 408 ರೂಪಾಯಿಗೆ ಒಂದು ಅಂದಾಜನ್ನು ಖುದ ಬೇಲೂರು ತಾಲ್ಲೂಕು ಅಮಲ್ದಾರ್ರು ರಿಪೋರ್ಟನ್ನು ಕಳುಹಿಸಿರುತ್ತೆಂತಲೂ ಮತ್ತು ನೀರಿನ ತುಡಾರಿಯು ಹೆಚ್ಚಾಗಿರುವದರಿಂದ ಈ ಅಂದಾಜವನ್ನು ಮಂಜೂರ್ಮಾಡಬಹುದೆಂತಲೂ ಬಂದ ಸಕ್ಲೇಶಪುರದ ಅಸಿಸ್ಟೆಂಟ್ ಕಮಿಷನರವರ 31-3—17—4—09ರ ಮತ್ತು ಂ 394—3917ನೆ ನಂಬರು ಯಾದಾಸ್ತು ಓದಲಾಯಿತು.

ತೀರ್ಮಾನ—ಈ ಚಿಲ್ಕೂರು ಗ್ರಾಮವು ಕ್ಷಾಮ ಪೀಡಿತವಾದ ಪ್ರದೇಶದಲ್ಲಿಲ್ಲದಿರುವದರಿಂದಲೂ ಮತ್ತು ಹಣವಿಲ್ಲದಿರುವದರಿಂದ ಈ ಭಾವಿ ಕಾಂಗಾರಿಯನ್ನು ಮಂಜೂರ್ಮಾಡಲು ಆಗಲಾರದೆಂದು ತೀರ್ಮಾನಿಸಲಾಯಿತು.

XIV. ಅರಸೀಕೆರೆ ತಾಲ್ಲೂಕು ವಿಹವದ್ದಪುರದ ಭಾವಿಯನ್ನು ಆಳಪಡಿಸುವವಕ್ಕೆ 100 ರೂಪಾಯಿಗೆ ಬಂದು ಅಂದಾಜನ್ನು ಮಂಜೂರಿ ಬಗ್ಗೆ ಕಳುಹಿಸಿರುತ್ತೆಂತಲು ಮತ್ತು ಈ ಕೆಲಸಕ್ಕಾಗಿ ಗ್ರಾನುಸ್ಥರು 50 ರೂಪಾಯಿ ಕಂಟ್ರಿಬ್ಯೂಷನ್ ಕೊಟ್ಟರುವದಾಗಿ ಸಹಾ ತಿಳಿಸುವ ಜನರಲ್ ಅಸಿಸ್ಟೆಂಟ್ ಕಮಿಷನರವರ 5—4—09ರ ಮಕ್ಕಂ 1420—3659ನೆ ನಂಬರ್ ಯಾದಾಸ್ತು ಆಕ್ಷೇರಾದ ನಡವಳಿಕೆ ಓದಲಾಯಿತು.

ತೀರ್ಮಾನ—ಹಣವಿಲ್ಲದೆ ಇರುವದರಿಂದಲು ಮತ್ತು ಈ ಗ್ರಾಮ ಕ್ಷಾಮಪೀಡಿತವಾದ ಪ್ರದೇಶದಲ್ಲಿಲ್ಲವಾಗಿಯು ಈ ಭಾವಿ ಕೆಲಸವನ್ನು ಮಂಜೂರ್ಮಾಡಲಿಕ್ಕೆ ಆಗಲಾರದೆಂದು ತೀರ್ಮಾನಿಸಲಾಯಿತು.

XV. ಅರಸೀಕೆರೆ ತಾಲ್ಲೂಕು ಕಸಬಾ ಹೋಬಳಿ ಭಂಡಿಹಳ್ಳಿ ಗ್ರಾನುದಲ್ಲಿ ಭಾವಿಯನ್ನು ಆಳಪಡಿಸತಕ್ಕ ಬಗ್ಗೆ 65 ರೂಪಾಯಿಗಳಿಗೆ ಬಂದು ಅಂದಾಜವನ್ನು ಕಳುಹಿಸಿ ಈ ಕೆಲಸವು ಅತ್ಯವಶ್ಯಕವಾಗಿರುವದರಿಂದ ಅಂದಾಜ ಮಂಜೂರ್ಮಾಡಬಹುದೆಂಬ ಅರಸೀಕೆರೆ ತಾಲ್ಲೂಕು ಅವಲ್ದಾರರ 4—4—09ರ ಮರು ಂ 450-3654ನೆ ನಂಬರು ರಿಪೋರ್ಟು ಓದಲಾಯಿತು.

ತೀರ್ಮಾನ—ಭಂಡಿಹಳ್ಳಿ ಗ್ರಾಮವು ಕ್ಷಾಮ ಪೀಡಿತವಾದ ಗ್ರಾಮವಾಗಿರುತ್ತೆಯಾಗಿ ಪ್ರಸಕ್ತವಾದ ಅಂದಾಜವನ್ನು ಮಂಜೂರ್ಮಾಡಿರುತ್ತೆಂತಲು ಈ ಅಂದಾಜ ವೆಂಬಲಗು 65 ರೂಪಾಯಿಗಳನ್ನು ರೆವಿನ್ಯೂ ಕಮಿಷನರ್ ಸಾಹೇಬರವರಿಂದ ವಂಜೂರಾದ 1,000 ರೂಪಾಯಿಗಳ ಸ್ಪೆಷಲ್ ಅಲಾಟ್‌ಮೆಂಟ್ ಪೈಕಿ ಖರ್ಚು ಹಾಕತಕ್ಕದ್ದೆಂದು ತೀರ್ಮಾನಿಸಲಾಯಿತು.

XVI. ಕೆರೋಡಿಬಳಿ ಇರತಕ್ಕ ಟೋಲು ಷಡ್ಡಿಗಳ ರಿಪೇರಿಗಾಗಿ 17 ರೂಪಾಯಿಗಳಿಗೆ ಬಂದು ಅಂದಾಜ ತಯಾರ್ಮಾಡಿಸಿ ಕಳುಹಿಸಿರುವದಾಗಿಯು ಈ ಖರ್ಚನ್ನು ಚಾಲ್ತಿಸಾಲು ಡಿಸ್ಟ್ರಿಕ್ಟ್ ಫಂಡು ಬಜೆಟ್ಟಿನಲ್ಲಿ X ಮಿನ್ಸೆನಿಯಸ್ (11) ಟೋಲುಗೇಟು ಖರ್ಚು ಎಂಬ ಹೆಡ್ಡಿನಲ್ಲಿ ದಾಖಲ್ಮಾಡಿರುವ 400 ರೂಪಾಯಿಗಳ ಪೈಕಿ ಕೊಡಬಹುದೆಂದು ಬುದ ಮಂಜರಾಬಾದು ತಾಲ್ಲೂಕು ಅವಲ್ದಾರರ 21—4—09ರ ಮರ್ಕುಂ 793-3966ನೆ ನಂಬರ್ ರಿಪೋರ್ಟು ಓದಲಾಯಿತು.

ತೀರ್ಮಾನ—ಈ 17 ರೂಪಾಯಿನ ಅಂದಾಜವನ್ನು ಮಂಜೂರ್ಮಾಡಿರುವದಾಗಿಯು ಈ ವೆಂಬಲಗನ್ನು ಚಾಲ್ತಿ ಸಾಲ್ ಡಿಸ್ಟ್ರಿಕ್ಟ್ ಫಂಡ್ ಬಜ್ಜೆಟ್ಟಿನಲ್ಲಿ X ಮಿಸಲೇನಿಯಸ್ (11) ಟೋಲು ಗೇಟ್ ಖರ್ಚು ಎಂಬ ಹೆಡ್ಡಿನಲ್ಲಿರುವ 400 ರೂಪಾಯಿಗಳ ಪೈಕಿ ಕೊಡಬೇಕಾಗಿ ಸಹ ತೀರ್ಮಾನಿಸಲಾಯಿತು.

XVII. ಇಂಜೀನೇರ್ಡ ಸೆನ್ ಫಂಡ್ ಬಜ್ಜೆಟ್ ಅಂದಾಜಾಗಳನ್ನು ತಯಾರ್ಮಾಡತಕ್ಕ ವಿಚಾರದಲ್ಲಿ ಇನ್ಸ್ಟ್ರಕ್ಷನ್ ಕೊಟ್ಟು ಬಂದ ರೆವಿನ್ಯೂ ಕಮಿಷನರ್ ಸಾಹೇಬರವರ 27-30—4—09ನೆ ಮರ್ಕುಂ 11162-9ನೆ ನಂಬರು ಸರ್ಕುಲರ್ ಓದಲಾಯಿತು.

ತೀರ್ಮಾನ—ಟಿಪ್ಪಣಿ ಇಡಿಸಲಾಯಿತು ಮತ್ತು ಪ್ರಸಕ್ತವಾದ ಬಜ್ಜೆಟ್ ಅಂದಾಜಗಳು ರೆವಿನ್ಯೂ ಕಮಿಷನರ್ ಸಾಹೇಬರವರ ಸರ್ಕುಲರ್ ಅನುಸರಿಸಿ ರಿವೈಜಾಗಿ ಬರಲು ಈ ಅಂದಾಜಗಳನ್ನು ರೆವಿನ್ಯೂ ಕಮಿಷನರವರ ಸರ್ಕುಲರ್ ಕಾಮಿನಿಸಿ ಹಾಗನವ ಎಗ್ಜಿಕ್ಯೂಟಿವ್ ಇಂಜನಿಯರವರಿಗೆ ಕಳುಹಿಸತಕ್ಕದ್ದೆಂದು ತೀರ್ಮಾನಿಸಲಾಯಿತು.

XVIII. ಡಿಸ್ಟ್ರಿಕ್ಟ್ ಫಂಡ್ ಕಟ್ಟಡಗಳಿಗೆ ಬಣ್ಣ ಕಾಮಗಾರಿ ಮಾಡಿಸತಕ್ಕ ಬಗ್ಗೆ ಬಂದ ಈ ಕೆಳಗೆ ಕಾಣಿಸಿರುವ ಅಂದಾಜಗಳನ್ನು ಓದಲಾಯಿತು.

ತಾಲ್ಲೂಕು ಮತ್ತು ಕೆಲಸದ ಹೆಸರು.					ಅಂದಾಜಾ ವೆಂಬಲಗು.
		ಮಂಜರಾಬಾದ್ ತಾಲ್ಲೂಕು.			ರೂ.
ಬಾಟು ಕಾಮಗಾರಿ	ಹಾನಬಾಳ್ ದೊಡ್ಡಿ	...	...	...	5
ಡಿಟೋ	ಹಾನಬಾಳ್ ಮುಸಾಫರ್‌ಖಾನಾ	...	...	...	11
ಡಿಟೋ	ಕೆಂಚಮ್ಮನಹೊಸಕೋಟೆ ಡಿಟೋ	...	...	...	14
ಡಿಟೋ	ಹೆತ್ತೂರು ಡಿಟೋ	...	...	...	34
ಡಿಟೋ	ಸಕಲೇಶಪುರ ಡಿಟೋ	...	...	...	23
ಡಿಟೋ	ಪಾರ್ಶ್ವಹಳ್ಳಿ ಡಿಟೋ	...	...	...	10
ಡಿಟೋ	ಯಸಳೂರು ದೊಡ್ಡಿ	...	...	...	4
ಡಿಟೋ	ಶುಕ್ರವಾರಸಂತೆ ಮುಸಾಫರ್‌ಖಾನಾ	...	...	...	6
ಡಿಟೋ	ಡಿಟೋ ಛತ್ರ	...	..	...	7
ಡಿಟೋ	ಕೆಂಚಮ್ಮನಹೊಸಕೋಟೆ ದೊಡ್ಡಿಗೆ	...	...	...	6
		ಆಲೂರು ಸಬ್ ತಾಲ್ಲೂಕು			
ಡಿಟೋ	ಪಾಳ್ಯದ ದೊಡ್ಡಿಗೆ	...	...	...	6
					126

ತೀರ್ಮಾನ — ಮಂಜೂರ್ಮಾಡಿ ಇರುತ್ತೆ.

XIX. ಡಿಸ್ಟ್ರಿಕ್ಟು ಮತ್ತು ತಾಲ್ಲೂಕು ಬೋರ್ಡುಗಳ ನ್ಯಾ ಅಫಿಷಿಯಲ್ ಮೆಂಬರುಗಳಿಗೋಸ್ಕರ ಟ್ರಾವಲಿಂಗ್ ಅಲೋವೆನ್ಸು ಡ್ರಾ ಮಾಡತಕ್ಕ ಮತ್ತು ಪಾವತಿ ಮಾಡತಕ್ಕ ವಿಚಾರದಲ್ಲಿ ಕೆಲವು ಬದಲಾವಣೆಗಳನ್ನು ಸೂಚಿಸಿ ಈ ವಿಚಾರದಲ್ಲಿ ಡಿಸ್ಟ್ರಿಕ್ಟು ಮತ್ತು ತಾಲ್ಲೂಕು ಬೋರ್ಡುಗಳ ಅಭಿಪ್ರಾಯ ತಿಳಿಸಬೇಕಾಗಿ ಬಂದ 27—2—09ರ ಮುಕ್ತಂ 8389-96—ಲೋ. ಬೋ. 216-08ನೆ ನಂಬರು ಗವರ್ನಮೆಂಟ್ ಪ್ರೊಸಿಡಿಂಗ್ಸು ಓದಲಾಯಿತು.

ಬೇಲೂರು ಮತ್ತು ಚನ್ನರಾಯಪಟ್ಟಣ ತಾಲ್ಲೂಕುಗಳ ಹೊರ್ತು ಇತರ ತಾಲ್ಲೂಕುಗಳಿಂದ ಬಂದ ಇದೇ ವಿಚಾರದಲ್ಲಿನ ತೀರ್ಮಾನಗಳನ್ನು ಸಹಾ ಓದಲಾಯಿತು.

ತೀರ್ಮಾನ—ಗವರ್ನಮೆಂಟ್ ಪ್ರೊಸಿಡಿಂಗ್ಸು ಓದಿದಲ್ಲಿ ಪ್ರಸಕ್ತವಾದ ಭತ್ಯಾ ಬಿಲ್ಲುಗಳು ಕಂಟ್ರೋಲರವರಿಂದ ಫ್ರೀ ಆಡಿಟ್ಟಾಗಿ ಬರತಕ್ಕದ್ದು ಅವಶ್ಯವಿಲ್ಲವೆಂತ ತಿಳಿಯಬರುತ್ತೆ. ಈ ಕ್ರಮವು ಅನುಕೂಲವಾಗಿರುತ್ತೆಂತ ಬೋರ್ಡಿನವರು ಅಭಿಪ್ರಾಯಪಡುತ್ತಾರಾಗಿ ತೀರ್ಮಾನಿಸಲಾಯಿತು.

XX. (a) ಕುಡಿಯುವ ನೀರಿಗೆ ಬಹಳ ತೊಂದರೆದಾಗಿರುವದರಿಂದ ಬಂದು ಭಾವಿ ತೆಗಿಸಿಕೊಡಬೇಕಾಗಿ ಮಂಜರಾಬಾದ್ ತಾಲ್ಲೂಕು ಬೆಳ್ಳೂರು ಗ್ರಾಮಸ್ಥರು ಗುಜರಾಯಿಸಿಕೊಂಡಿರುವ 26—4—09ರ ಮುಕ್ತಂ ಅರ್ಜಿ ಓದಲಾಯಿತು.

(b) ಚೆಂಗಡಿಹಳ್ಳಿ ಗ್ರಾಮದಲ್ಲಿ ಪ್ರತ್ಯೇಕ ಭಾವಿ ತೆಗಿಸತಕ್ಕದ್ದು ಅವಶ್ಯವಿಲ್ಲವಾಗಿ ಇದಕ್ಕಾಗಿ ಮಂಜೂರಾಗಿದ್ದ 250 ರೂಪಾಯಿಗಳ ಅಂದಾಜವನ್ನು ವಜಾ ಮಾಡಿ ಈ ಮೊಬಲಗನ್ನ ಬೆಳ್ಳೂರು ಗ್ರಾಮದಲ್ಲಿ ಭಾವಿ ತೆಗಿಸತಕ್ಕ ಬಗ್ಗೆ ಉಪಯೋಗಿಸಿಕೊಳ್ಳಬಹುದೆಂದು ಬಂದ ಮಂಜರಾಬಾದ್ ತಾಲ್ಲೂಕು ಅಮಲ್ದಾರ್ರ 29—4—09ರ ಮುಕ್ತಂ 824ನೆ ನಂಬರು ರಿಪೋರ್ಟು ಓದಲಾಯಿತು.

ತೀರ್ಮಾನ—ಬೆಳ್ಳೂರು ಗ್ರಾಮಸ್ಥರು ಮಟ್ಟ ಕಾವುಗಾರಿಯನ್ನು ಪುರು ಮಾಡಿಲ್ಲವಾಗಿ ತಿಳಿಯಬರುವದರಿಂದ ಹಾಲಿ ವರುಷದ ಅಂತ್ಯಭಾಗದಲ್ಲಿ ಇಂಥಾ ಭಾವಿಗೆ ರಿವೆಟ್‌ಮೆಂಟು ಬಗ್ಗೆ ಅಂದಾಜು ಮಂಜೂರ್ಮಾಡಲಿಕ್ಕೆ ಆಗುವದಿಲ್ಲವೆಂತಲೂ ಸಕಾಲದಲ್ಲಿ ಮಟ್ಟ ಕಾವುಗಾರಿ ಪೂರೈಸಿ ನಂತರ ರಿವೆಟ್‌ಮೆಂಟು ಬಗ್ಗೆ ಕೇಳಿಕೊಳ್ಳಬೇಕಾಗಿ ಗ್ರಾಮಸ್ಥರಿಗೆ ತಿಳಿಸಬೇಕಾಗಿ ಸಹಾ ತೀರ್ಮಾನಿಸಲಾಯಿತು ಮತ್ತು ಹಾನ್‌ಬಾಳ್‌ನಲ್ಲಿರತಕ್ಕ ಲೋಕಲ್ ಫಂಡ್ ಭಾವಿ ಒಣಗಿ ಹೋಗಿರುವದರಿಂದಲೂ ಈ ಗ್ರಾಮದಲ್ಲಿ ಟ್ರಾವಲರ್ಸ್ ಬಂಗ್ಲೆ, ಮುನಸಾಫರ್‌ಖಾನೆ, ಪೊಲೀಸ್ ಸ್ಟೇಷನ್ ಮತ್ತು ಆಸ್ಪತ್ರೆ ಸಹಾ ಇರುವದರಿಂದ ಇಲ್ಲಿ ನೀರಿಗೆ ವಸತಿ ಉಂಟುಮಾಡತಕ್ಕದ್ದು ಅವಶ್ಯವಾದ್ದರಿಂದ ಮೇಲ್ಕಂಡ ಮೊಬಲಗು ಪೈಕಿ ಕೊಂಚ ಮೊಬಲಗನ್ನು ಈ ಭಾವಿಯನ್ನು ಆಳ ಪಡಿಸುವದಕ್ಕು ಮತ್ತು ರಿಪೇರಿ ಮಾಡುವದಕ್ಕು ಉಪಯೋಗಿಸಿಕೊಳ್ಳಬೇಕೆಂದು ತೀರ್ಮಾನಿಸಲಾಯಿತು.

XXI. 1909-10ನೆ ಸಾಲಿನ ಡಿಸ್ಟ್ರಿಕ್ಟು ಫಂಡ್ ಬಜ್ಜೆಟ್ ಅಂದಾಜಗಳನ್ನು ಮಂಜೂರ್ಮಾಡಿ ಇರುತ್ತೆಂದು ಬಂದ 28—4—09ರ ಮುಕ್ತಂ 10681-94—ಲೋ. ಬೋ. 313-08ನೆ ನಂಬರು ಗವರ್ನಮೆಂಟ್ ಪ್ರೊಸಿಡಿಂಗ್ಸು ಓದಲಾಯಿತು.

ತೀರ್ಮಾನ—ಓದಿ ವಿಲೆ ಇಡಿಸಲಾಯಿತು ಮತ್ತು ಪ್ರಸಕ್ತವಾದ ಬಜ್ಜೆಟ್ಟಿನಲ್ಲಿ X ವಿುಸಲೇನಿಯಸ್ ಅಪ್‌ಪೋರ್ಸ್ ಎಕ್ಸ್‌ಪೆಂಡಿಚರ್ ಮತ್ತು A. P. W. II ರಿಪೇರಿ ಮತ್ತು ರಿಸರ್ವ್ ಎಂಬ ಹೆಡ್ಡುಗಳಲ್ಲಿ ಡಾಖಲ್ಮಾಡಿದ್ದ ಮೊಬಲಗುಗಳನ್ನು ವಜಾ ಮಾಡಿರುವದನ್ನು ಈ ಮೊಬಲಗು ಅತ್ಯವಶ್ಯಕವಾಗಿರುವದರಿಂದ ಪುನಹ ಮಂಜೂರ್ಮಾಡಬೇಕಾಗಿ ಕಾರಣ ನಿತಿ ಗವರ್ನಮೆಂಟಿಗೆ ಜಾಹಿರ್ಮಾಡಿಕೊಳ್ಳಬೇಕಾಗಿ ತೀರ್ಮಾನಿಸಲಾಯಿತು.

XXII. ಬರುವ ಸಾಲಿನಲ್ಲಿ ಮಂಜರಾಬಾದ್ ತಾಲ್ಲೂಕಿನಲ್ಲಿ ಇರುವ ಕ್ಯಾತೆಹೊಳೆ ಮತ್ತು ವಣಗೂರು ಟೋಲು ಗೇಟು ವಿಚಾರದಲ್ಲಿ ಯಾವರೀತಿ ನಡಿಸಬೇಕೆಂಬ ಸಕಲೇಶಪುರದ ಅಸಿಸ್ಟೆಂಟ್ ಕಮಿಷನರವರ 2—5—09ರ ಮುಕ್ತಂ 399ನೆ ನಂಬರು ಯಾದಾಸ್ತು ಓದಲಾಯಿತು.

ಬರುವ ಸಾಲ್ ಲಾಗಾಯಿತು ಇದರಡಿ ನಮೂದಿಸಿರುವ ಡಿಸ್ಟ್ರಿಕ್ಟು ಬೋರ್ಡ್ ಬಾಬತು ರಸ್ತೆಗಳಮೇಲೆ ಮತ್ತು ಸೇತುವೆಯ ಬಳಿ ಇರುವ ಟೋಲು ಗೇಟನ್ನು 2 ವರುಷಗಳಿಗೆ ಹರಾಜು ಮಾಡಿಸತಕ್ಕದ್ದು ತುಂಬಾ ಅನುಕೂಲವೆಂಬದಾಗಿ ಪ್ರೆಸಿಡೆಂಟರವರು ಸೂಚಿಸಿದರು.

ಡಿಸ್ಟ್ರಿಕ್ಟು ಫಂಡ್ ರಸ್ತೆಗಳಮೇಲಿನ ಟೋಲು ಗೇಟ್—ದುದ್ದ—ಕ್ಯಾತೆಹೊಳೆ—ವಣಗೂರು.

ಡಿಟೋ — ಸೇತುವೆ—ಹೊಳೇನರಸೀಪುರ.

ತೀರ್ಮಾನ—2 ವರುಷಕ್ಕೊದಾವರ್ತಿ ಈ ಗೇಟುಗಳನ್ನು ಹರಾಜ್ ಮಾಡುವದು ಅನುಕೂಲವಾದ್ದರಿಂದ ಈ ದಫಾಕ್ಕೆ ಆ ರೀತಿ ಮಾಡಬೇಕಂತಲೂ ಇದಕ್ಕೆ ಗವರ್ನಮೆಂಟಿನವರ ಒಪ್ಪಿಗೆಯನ್ನು ಪಡಿಯಬೇಕೆಂತ ತೀರ್ಮಾನಿಸಲಾಯಿತು.

XXIII. ಹಾಸನ ತಾಲ್ಲೂಕು ಕಲ್ಲಹಳ್ಳಿ ಗ್ರಾಮಸ್ಥರು ಸದರಿ ಗ್ರಾಮದಲ್ಲಿ ಬಂದು ಭಾವಿ ತೆಗಿಯುವದಾಗಿಯೂ ಇದಕ್ಕೆ ಕೂಡ್ಲೆ ಕಲ್ಲುಕಟ್ಟಿಸುವದು ಅವಶ್ಯಕವಾಗಿರುತ್ತೆ ಹಾಗಿಲ್ಲದಪಕ್ಷ ಬರುವ ಮಳೆಗಾಲದಲ್ಲಿ ಭಾವಿ ಬೀಳಬಹುದಾದ್ದರಿಂದ ಇದಕ್ಕಾಗಿ 300 ರೂಪಾಯಿ ಮಂಜೂರ್ಮಾಡಿಸಿ ಕೊಡಬೇಕೆಂಬ ಬಗ್ಗೆ ಹಾಸನ ತಾಲ್ಲೂಕು ಅಮಲ್ದಾರ್ರಿಂದ ತಲ್ಪಿದ 2-509ರ ಮುಕ್ತಂ 886ನೆ ನಂಬರು ರಿಪೋರ್ಟು ಓದಲಾಯಿತು.

ತೀರ್ಮಾನ—ಹಾಲ್‌ಸಾಲ್ ಬಜ್ಜೆಟ್ಟಿನಲ್ಲಿ ಹಣವಿಲ್ಲದಿರುವದರಿಂದ ಈ ಸಾಲಿನಲ್ಲಿ ಈ ಕೆಲಸವನ್ನು ಮಂಜೂರ್ಮಾಡಲು ಅವಕಾಶವಿಲ್ಲವೆಂತ ತೀರ್ಮಾನಿಸಲಾಯಿತು.

XXIV. ಆಲೂರು ಸಬ್ ತಾಲ್ಲೂಕು ಭತ್ತೂರು ಕಡುವಿಗೆ ಬಂದು ಹರಿಗೋಲು ಅವಶ್ಯಕವಾಗಿರುತ್ತೆ ಇದಕ್ಕಾಗಿ 60 ರೂಪಾಯಿಗಳನ್ನು ಮಂಜೂರ್ಮಾಡಬೇಕೆಂತ ಆಲೂರು ಡೆಪ್ಯೂಟಿ ಅಮಲ್ದಾರ್ರಿಂದ ತಲ್ಪಿದ 1—5—09ರ ಮುಕ್ತಂ 692ನೆ ನಂಬರು ರಿಪೋರ್ಟು ಓದಲಾಯಿತು.

ತೀರ್ಮಾನ—ಪ್ರಸಕ್ತವಾದ ಹರಿಗೋಲಿಗೋಸ್ಕರ ಹಾಲಸಾಲ್ ಡಿಸ್ಟ್ರಿಕ್ಟ್ ಫಂಡ್ ಬಡ್ಜೆಟ್ X ಮಿಸಲೇನಿಯಸ್ (o) ದೋಣಿಗಳಿಗೋಸ್ಕರ ದಾಖಲಾಗಿರುವ 150 ರೂಪಾಯಿಗಳ ಪೈಕಿ 60 ರೂಪಾಯಿ ಮಂಜೂರ್ಮಾಡಬಹುದೆಂತ ತೀರ್ಮಾನಿಸಲಾಯಿತು.

XXV. ಹಾಸನ ತಾಲ್ಲೂಕು ಗ್ರಾಮದಲ್ಲಿ ಇರುವ ವೈದ್ಯಶಾಲಾ ಉಪಯೋಗಕ್ಕೋಸ್ಕರ ಅವಶ್ಯಕವಾಗಿರುವ ಸಾಮಾನುಗಳಿಗೋಸ್ಕರ 29 ರೂಪಾಯಿಗಳು ಬೇಕೆಂಬ ಹಾಸನ ತಾಲ್ಲೂಕು ಅಮಲ್ದಾರರ 3—5—09ರ ಮತ್ತು 888ನೆ ನಂಬರು ರಿಪೋರ್ಟು ಓದಲಾಯಿತು.

ತೀರ್ಮಾನ—ಅತ್ಯವಶ್ಯಕವಾದ ಸಾಮಾನು ಕೊಂಡುಕೊಳ್ಳುವದಕ್ಕೋಸ್ಕರ ಹಾಲಸಾಲ್ ಬಡ್ಜೆಟ್ಟಿನಲ್ಲಿ II ವೈದ್ಯಶಾಲೆಗಳಿಗೋಸ್ಕರ ದಾಖಲಾಗಿರುವ 1,164 ರೂಪಾಯಿಗಳ ಪೈಕಿ 12—4—0 ರೂಪಾಯಿ ಮಂಜೂರ್ಮಾಡಬಹುದೆಂತ ತೀರ್ಮಾನಿಸಲಾಯಿತು.

XXVI. ಇದರಡಿ ಕಾಣಿಸಿರುವ ಡಿಸ್ಟ್ರಿಕ್ಟ್ ಬೋರ್ಡ್ ಮೆಂಬರುಗಳು ಮಿಟಿಂಗಿಗೆ ಹಾಜರಾಗಲು ಅನುಕೂಲವಿಲ್ಲವೆಂಬ ಬಗ್ಗೆ ಬರಿಸಿದ ಖತ್ತುಗಳನ್ನು ಓದಲಾಯಿತು.

ಮಿ॥ ವೆಂಕಟರಾಮಯ್ಯನವರು.
,, ರಾಮಶೆಟ್ಟು.
,, ಕ್ಯಾಥರ್ಡ್ ಸಾಹೇಬರು.
,, ಐಗೂರು ಮಲ್ಲೆಗೌಡರು.

ಮಿ॥ ಹಬೀಬುಲ್ಲಾ ಸಾಹೇಬರು.
,, ಕೆಂಚರಾಯ ಶೆಟ್ಟರು.
,, ಧರಣೈಯ್ಯ ಶೆಟ್ಟರು.

ತೀರ್ಮಾನ—ಕೇಳಿ ವಿಲೆ ಇಡಿಸಲಾಯಿತು.

XXVII. ಬರುವ ಮಿಟಿಂಗನ್ನು 1909ನೆ ಇಸವಿ ಆಗಸ್ಟು ಮಾಹೆ 9ನೆ ತಾರೀಖು ಸೋಮವಾರ ಮಧ್ಯಾಹ್ನ 1 ಘಂಟೆಗೆಂತ ತೀರ್ಮಾನಿಸಲಾಯಿತು.

ಬಿ. ಆರ್. ಡಬ್ಲ್ಯು. ವೆದರಾಲ್,
ಪ್ರೆಸಿಡೆಂಟ್.

ಇಸ್ತಿಹಾರ್.

ತಾರೀಖು 26ನೆ ಜೂ॥ 1909ನೆ ಇಸವಿ.

ಹಾಸನ ತಾಲ್ಲೂಕು ಕಸಬಾ ಹೋಬಳಿ ಜೋಡಿ ಹಂದಿನಕೆರೆ ಗ್ರಾಮವು ಜೋಡಿದಾರರಿಂದ ಸರ್ಕಾರಕ್ಕೆ ಬರಬೇಕಾದ ಬಾಕಿಗೋಸ್ಕರ 1909ನೆ ಇಸವಿ ಆಗಸ್ಟು 23ನೆ ತಾರೀಖಿನಲ್ಲಿ ಹರಾಜು ಮಾಡಿಸಲ್ಪಡುತ್ತೆಂದು ಈ ಮೂಲಕ ಪ್ರಸಿದ್ಧಪಡಿಸಲ್ಪಟ್ಟಿರುತ್ತೆ.

ಹೆಚ್ಚು ತಪಶೀಲ್ ಬಗ್ಗೆ 1909ನೆ ಇಸವಿ ಜುಲೈ ಮಾಹೆ 8ನೆ ನುರ್ತು ಮೈಸೂರು ಗೆಜೆಟ್ಟಿನ IIನೆ ಭಾಗದ 545—546ನೆ ಪುಟಗಳನ್ನು ನೋಡತಕ್ಕದ್ದು.

ನರಸಿಂಗರಾವ್ ಪೂರ್ಣಯ್ಯ, ಛಾರ್ ಡೆಪ್ಯುಟಿ ಕಮಿಷನರ್.

ಕಡೂರು ಡಿಸ್ಟ್ರಿಕ್ಟು.

ಇಸ್ತಿಹಾರ್.

ತಾರೀಖು 29ನೆ ಜೂ॥ 1909.

ಲೇಟ್ ಚಿಕ್ಕಮಗಳೂರು ಅಗ್ರಿಕಲ್ಚರಲ್ ಬ್ಯಾಂಕಿನ ಬಗೆ ಮೈಸೂರು ಸರಕಾರಕ್ಕೆ ಸದರಿ ಬ್ಯಾಂಕಿನ ಮೆಂಬರುಗಳಾದ—

1. ಮಿ॥ ಅಣ್ಣಿಗಿರಿ ವಸ್ತಾರದ ಶಾನುರಾಯರು.
2. ,, ವಿ. ಜಗನ್ನಾಥರಾಯರು, ಲೇಟ್.
3. ,, ಮಂಕಾಲಗಣೇಶರಾಯರ ಕುಟುಂಬ ಸರಸ್ವತಮ್ಮ.
4. ,, ಜೆ. ಅಬ್ದುಲ್ ಖಲೀಕ್ ಸಾಬರು.
5. ,, ಟಿ. ರಾಘವೇಂದ್ರಸ್ವಾಮಿಯವರು.
6. ,, ಕರ್ಕಿಪೇಟೆ ಶಿವಪ್ಪಶೆಟ್ಟರು.
7. ,, ಶಿವಾಜಿ ರಾಮಚಂದ್ರರು.
8. ,, ಸಿ. ಖಾನವೇಗೌಡರು, ಚಿಕ್ಕಮಗಳೂರು.

ಇವರುಗಳಿಂದ ಸಲ್ಲಬೇಕಾಗಿದ್ದು ಹಾಲಿ ಬಾಕೀಲಿ ನಿಂತಿರುವ ಸಾಲದ ಪೊಬಲಗುಗಳನ್ನು ಬರಮಾಡಿಕೊಳ್ಳಲು ನಾಳೆ ಬರುವ ಸ॥ 1909ನೆ ಇಸವಿ ಸೆಪಟಂಬರು ತಾರೀಖು 10ನೆ ದಿವಿ 11 ಘಂಟೆಗೆ ಕಡೂರು ಡಿಸ್ಟ್ರಿಕ್ಟು ಚಿಕ್ಕಮಗಳೂರು ತಾಲ್ಲೂಕು ಕಛೇರಿ ಬಳಿ, ಸದರಿಯವರುಗಳಿಂದ ಸದರಿ ಬ್ಯಾಂಕಿಗೆ ಹೊಣೆ ಮಾಡಲ್ಪಟ್ಟ ಸ್ಥಿರಸ್ವತ್ತುಗಳು ಕಡೂರು ಡಿಸ್ಟ್ರಿಕ್ಟು ಡೆಪ್ಯುಟಿ ಕಮಿಷನರ್ ಸಾಹೇಬರವರಿಂದಲಾಗಲಿ ಆ ಆಬ್ಜೆಕ್ಷನ್ಸುಗಳು ಹಿಸಲ್ಪಡುವ ಅಸಿಸ್ಟೆಂಟ್ ಕಮಿಷನರವರಿಂದಲಾಗಲಿ, ಸ॥ 1908ನೆ ಇಸವಿ ಜನವರಿ ತಾರೀಖು 16ನೆ ಗವರ್ನಮೆಂಟ್ ಪ್ರೊಸೀಡಿಂಗ್ಸ್ ನಂ. Fl. 3526-28-B,—07-15ನ್ನನುಸರಿಸಿ ಬಹಿರಂಗವಾಗಿ ಹರಾಜ್ ಮಾಡಲ್ಪಡುತ್ತವೆ.

2. ಸಾಲದಬಾಕಿ, ಸ್ವತ್ತುಗಳು, ಹರಾಜ್ ಪರತ್ತುಗಳು, ಈ ತಪಶೀಲುಗಳ ಬಗ್ಗೆ ಸ॥ 1909ನೆ ಜುಲೈ ತಾರೀಖು 15ನೆ ಮೈಸೂರ ಗೆಜೆಟ್ 2ನೆ ಭಾಗದ 555, 556, 557, 558, 559, 560, 561, 562ನೆ ನಂ. ಪುಟಗಳನ್ನು ನೋಡುವದು.

ಕೆ. ಆರ್. ಶ್ರೀನಿವಾಸೈಯ್ಯಂಗಾರ್,
ಡೆಪ್ಯುಟಿ ಕಮಿಷನರ್.